ಶ್ರೀ ಜೆ. ಎಲ್. ಕಬಾಡಿ.—ನಾನು ಕಳುಹಿಸಿರತಕ್ಕ ಮತ್ತು ಈಗ ಕೇಳುತ್ತಿರುವ ಪ್ರಶ್ನೆ ಸರ್ಕಾರದವರು ಈ ಗ್ರಾಮಸೇವಕಿಯರಿಗೆ ಎಲ್ಲಿ ಶಿಕ್ಷಣ ಕೊಡಿಸುತ್ತೀರಿ; ಎಷ್ಟು ಜನರಿಗೆ ಕೊಡಿಸುತ್ತೀರಿ ಎಂಬುದಲ್ಲ. ನಾನೀಗ ಕೇಳುತ್ತಿರುವ ಪ್ರಶ್ನೆ ಸರ್ಕಾರದವರು ಈಗ ಮೂರು ಸ್ಥಳಗಳಲ್ಲಿ ಉಮೇದುವಾರರನ್ನು ಆರಿಸಲು ಪ್ರಯತ್ನ ನಡೆಸಿದ್ದರಲ್ಲಿ ಆ ಸ್ಥಳಗಳಿಗೆ ಎಷ್ಟೆಷ್ಟು ಜನ ಉಮೇದುವಾರರು ಬಂದಿದ್ದರು; ಆ ಪೈಕಿ ಎಷ್ಟು ಜನರನ್ನು ಆರಿಸಲಾಯಿತು ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಆ ವಿವರಗಳನ್ನು ನಾಳೆ ನಿಮಗೆ ಮಂತ್ರಿಗಳು ತರಿಸಿಕೊಡುತ್ತಾರೆ.

Expenditure for holding Elections to Village Panchayats and Taluk Boards.

*Q.—149. Sri B. S. SHANKARAPPA (Hosadurga).—

Will the Government be pleased to state:—

(a) whether they have estimated the expenditure for holding elections to Village Panchayats and Taluk Boards in the State;

(b) if so, the estimated expenditure thereof:

(c) who will meet the expenses in connection with conducting the elections throughout the State?

A.—Sri T. SUBRAMANYA (Minister for Law, Labour and Local Self-Government).—

(a) Yes.

(b) The expenditure will be of the order of Rs. 10 lakhs.

(c) Government will have to meet the cost in the first instance; the cost will be recovered later from the Panchayats and Taluk Boards.

ಶ್ರೀ ಬಿ. ಎಸ್. ಶಂಕರಪ್ಪ.—(ಸಿ) ಗೆ ಉತ್ತರವಾಗಿ ತಿಳಿಸುತ್ತ ಆ ವೆಚ್ಚವನ್ನು ಕಡೆಗೆ ಗ್ರಾಮ ಪಂಚಾಯತಿ ಹಾಗೂ ತಾಲ್ಲೂಕು ಬೋರ್ಡುಗಳಿಂದ ವಸೂಲ್ಮಾಡ ರಾಗುತ್ತದೆ ಎಂದು ತಿಳಿಸಿದೆ. ಕೆಲವು ಕಡೆ ಒಂದೆರಡು ಗ್ರಾಮಗಳು ಸೇರಿ 1500 ಪ್ರಜಾಸಂಖ್ಯೆ ಆಗಿರತಕ್ಕ ಗ್ರಾಮ ಪಂಚಾಯತಿಗಳಿಗೆ ಈ ಹಣ ತೆರಲು ಬಹಳ ಕಷ್ಟವಾಗುತ್ತದೆ ಎನ್ನುವ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

†ಶ್ರೀ ಟಿ. ಸುಬ್ರಹ್ಮಣ್ಯ.—ಆ ಖರ್ಚು ಯಾವ ರೂಪದಲ್ಲಾದರೂ ಗ್ರಾಮ ಪಂಚಾಯತಿಗಳ ಹಾಗೂ ತಾಲ್ಲೂಕ್ ಬೋರ್ಡುಗಳ ಮೇಲೆ ಬಿದ್ದೇಬೀಳುತ್ತದೆ.

ಶ್ರೀ ಬಿ. ಎಸ್. ಶಂಕರಪ್ಪ.—ಹೆಚ್ಚು ವರಮಾನ ಎರತಕ್ಕ ಗ್ರಾಮ ಪಂಚಾಯತಿಗಳಾದರಂತೂ ಸರಿ; ಚಿಕ್ಕಪುಟ್ಟ ಗ್ರಾಮ ಪಂಚಾಯತಿಗಳಿಗೆ ಈ ಹೊರೆ ಹೊರಲು ಸಾಧ್ಯವಿಲ್ಲದಿರುವುದರಿಂದ ಅಂಥ ಸಣ್ಣಪುಟ್ಟ ಪಂಚಾಯತಿಗಳಿಗೆ ಸರ್ಕಾರ ಈ ಖರ್ಚನ್ನು ಮನ್ನಾ ಮಾಡಲು ಆಲೋಚನೆಮಾಡುವುದೇ?

ಶ್ರೀ ಟಿ. ಸುಬ್ರಹ್ಮಣ್ಯ.—ಹಾಗೇನೂ ಮಾಡುವುದ ಕ್ಕಾಗುವುದಿಲ್ಲ.

Dr. R. NAGAN GOWDA.—When are these elections likely to take place—both of them at the same time or separately?

Sri T. SUBRAMANYA.—The present proposal is to have the elections held at the same time; but there is some difficulty felt for the last three days with regard to the taluk boards. I am getting the whole thing examined; I am making a statement on the floor of the House some time later.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ವೆಚ್ಚವನ್ನು ಅಂದಾಜುಮಾಡುವಾಗ ಕಂಟೆನ್ಜೆನ್ಸಿ ಮಾಡದೆ ಇರತಕ್ಕ ಸಂದರ್ಭಗಳನ್ನ ಆ ಲೋಚನೆಮಾಡಿ ಮಾಡಿದ್ದೀರಾ?

ಶ್ರೀ ಟಿ. ಸುಬ್ರಹ್ಮಣ್ಯ.—ಎಲ್ಲಿ ಕಂಟೆನ್ಜೆನ್ಸಿ ಮಾಡುತ್ತಾರೆ, ಎಲ್ಲ ಮಾಡುವುದಿಲ್ಲ ಎಂಬುದನ್ನು ಮೊದಲೇ ಹೇಳುವುದಕ್ಕಾಗುವುದಿಲ್ಲ. ಪ್ರತಿಯೊಂದು ಬೂತಿಗೂ ಆಗತಕ್ಕ ಬ್ಯಾಲೆಟ್ ಪೇಪರು, ಇತ್ಯಾದಿ ಪ್ರತಿಯೊಂದು ಕಾರ್ಯವನ್ನು ಮಾಡಲೇಬೇಕಾಗುತ್ತದೆ. ಈಗ ಯಾವುದನ್ನೂ ಕರಾರುವಾಕ್ಕಾಗಿಮಾಡಿಲ್ಲ. ಒಂದು ಸಾಮಾನ್ಯ ಅಂದಾಜಿನ ಮೇಲೆ ಈ ವೆಚ್ಚವನ್ನು ತಯಾರಿಸಲಾಗಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ವೆಚ್ಚದಲ್ಲಿ ಅಧಿಕಾರಿಗಳ ಟಿ. ಎ. ಡಿ. ಎ. ಗಳನ್ನೆಲ್ಲ ಸೇರಿಸಿದ್ದೀರಾ?

ಶ್ರೀ ಟಿ. ಸುಬ್ರಹ್ಮಣ್ಯ.—ಹೌದು, ಸೇರಿಸಲಾಗಿದೆ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಏಕ ಕಾಲದಲ್ಲೇ ಗ್ರಾಮ ಪಂಚಾಯತಿಗಳಿಗೂ ಮತ್ತು ತಾಲ್ಲೂಕ್ ಬೋರ್ಡುಗಳಿಗೂ ಚುನಾವಣೆಗಳನ್ನು ನಡೆಸುವುದರಿಂದ ಹೆಚ್ಚಿನ ತೊಂದರೆಯಾಗುವುದಿಲ್ಲವೇ?

ಶ್ರೀ ಟಿ. ಸುಬ್ರಹ್ಮಣ್ಯ.—ಇತ್ತೀಚೆಗೆ ಸ್ವಲ್ಪ ತೊಂದರೆಯಾಗಬಹುದೆಂದು ಗೊತ್ತಾಗಿದೆ. ಆದರೆ ಯಾವುದನ್ನೂ ಇನ್ನೂ ಅಖೈರಾಗಿ ತೀರ್ಮಾನಮಾಡಿಲ್ಲ. ಈ ವಿಚಾರದಲ್ಲಿ ಈ ಅಧಿವೇಶನದಲ್ಲೇ ಒಂದು ಹೇಳಿಕೆಯನ್ನೇಕೊಡಬೇಕೆಂದು ತೀರ್ಮಾನಮಾಡಿಕೊಂಡಿದ್ದೇನೆ. ಆಗ ಎಲ್ಲ ವಿಚಾರಗಳೂ ತಮಗೆ ಗೊತ್ತಾಗುತ್ತವೆ.

Sri M. C. NARASIMHAN.—What is the provision to enable you to recover any expenditure on account of election from panchayats and taluk boards? Where is it said that panchayats and taluk boards should themselves be responsible for the expenditure?

Sri T. SUBRAMANYA.—Who else is to be responsible? It is the primary duty of all village panchayats and taluk boards to bear election expenses and therefore we will be advancing moneys and recovering from them as and when they get moneys.

Sri M. C. NARASIMHAN.—What is the recent enactment in relation to this matter?

Sri T. SUBRAMANYA.— If the Hon'ble Member will kindly go through the various expenses in the enactment, he will see that election expenses also are included.

ಶ್ರೀ ಟಿ. ತಾರೇಗೌಡ.—ಕಂಟೆಸ್ಟ್ ಆಗದೆ ಇರುವ ಪಂಚಾಯಿತಿಗಳಿಗೆ ಏನಾಯಿತಿ ತೋರಿಸುತ್ತೀರಾ ?

ಶ್ರೀ ಟಿ. ಸುಬ್ರಹ್ಮಣ್ಯ.—ಪೂರ್ವಭಾವಿಯಾಗೇ ಓಟಿಂಗ್ ಪೇಪರ್ ಇತ್ಯಾದಿಗಳೆಲ್ಲ ಪ್ರಿಂಟ್ ಆಗಿರುತ್ತವೆ. ಆ ಚಿಹ್ನೆಗಳನ್ನು ಇಡಲು ಅವುಗಳನ್ನೆಲ್ಲಾ ಮಾಡಿಸಿರುತ್ತದೆ. ಆ ವಿಚಾರಕ್ಕೆ ಅಷ್ಟಾಗಿ ಗಮನ ಕೊಡಲು ಅವಕಾಶವಿಲ್ಲ.

ಶ್ರೀ ಟಿ. ತಾರೇಗಾಡ.—ಕಂಟೆಸ್ಟ್ ಮಾಡಲು ಅವಕಾಶವಿಲ್ಲದ ಸ್ಥಳಗಳಿಗೆ ಏನಾಯಿತಿ ಕೊಡುವುದಕ್ಕಾಗುವುದಿಲ್ಲವೇ ? ಅಗತ್ಯವಿಲ್ಲವೆಂದು ಹೇಳುತ್ತೀರಾ ?

ಶ್ರೀ ಟಿ.ಸುಬ್ರಹ್ಮಣ್ಯ.—ಆ ಪ್ರಶ್ನೆ ಈಗಲೇ ಉದ್ಭವಿಸುವುದಿಲ್ಲ.

ಶ್ರೀ ಬಿ. ರಾಚಯ್ಯ.—ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡುಗಳಿಗೆ ಬೇರೆ ಬೇರೆ ಕಾಲದಲ್ಲಿ ಚುನಾವಣೆಗಳನ್ನು ನಡೆಸುವುದಾದರೆ ಎಷ್ಟು ಖರ್ಚಾಗುತ್ತದೆ ?

ಶ್ರೀ ಟಿ. ಸುಬ್ರಹ್ಮಣ್ಯ.—ಬೇರೆ ಬೇರೆ ಕಾಲದಲ್ಲಿ ಚುನಾವಣೆಯಾದರೆ ಎಷ್ಟೆಷ್ಟು ಖರ್ಚಾಗುತ್ತದೆ ಎಂಬುದನ್ನು ಇವೊತ್ತು ಅಂದಾಜುಮಾಡಿಲ್ಲ. ಆ ರೀತಿ ಅಂದಾಜು ಮಾಡಿ ಹೇಳಬೇಕೆಂದರೆ ಅದನ್ನೂ ಸಹ ತಿಳಿಸುತ್ತೇನೆ. ನನ್ನ ನಿರೀಕ್ಷಣೆ ವಿಲೇಜ್ ಪಂಚಾಯಿತಿ ಚುನಾವಣೆ ಬಹುಭಾಗ ಅಕ್ಲಾಂಟೆಸ್ಟ್ ಆಗಿ ಆಗುತ್ತದೆಂದಾಗಿದೆ. ಅಲ್ಲದೆ ತಾಲ್ಲೂಕ್ ಬೋರ್ಡ್ ಮತ್ತು ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಒಟ್ಟಿಗೆ ಸೇರಿಸಬೇಡಿ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ವಿಷಯವನ್ನು ಯೋಚನೆ ಮಾಡುತ್ತಿದ್ದೇವೆ. ಅದನ್ನು ಮುಂದೆ ತಿಳಿಸಲಾಗುತ್ತದೆ.

ಶ್ರೀ ಬಿ. ರಾಚಯ್ಯ.—ಈ ಚುನಾವಣೆಗಳಿಗೆ ಸುಮಾರು 10ಲಕ್ಷ ರೂಪಾಯಿಗಳು ಖರ್ಚಾಗಬಹುದು ಎಂದು ಅಂದಾಜು ಮಾಡಿದ್ದೀರಿ. ಯಾವ ಆಧಾರದ ಮೇಲೆ ಆ ರೀತಿ ಅಂದಾಜು ಮಾಡಿದ್ದೀರಿ ?

ಶ್ರೀ ಟಿ. ಸುಬ್ರಹ್ಮಣ್ಯ.—ಈಗ 10 ಸಾವಿರ ಪೋಲಿಂಗ್ ಬೂತ್‌ಗಳು ಅವಶ್ಯಕವಾಗಿ ಆಗಬೇಕಾಗಿವೆ. ಇನ್ನು seltting up of polling Booths, T.A and D.A of Polling personnel ಗೆ 2ಲಕ್ಷ ರೂಪಾಯಿಗಳು ; ಸ್ಟೇಷನರಿ ಮತ್ತು ಟ್ರಾನ್ಸ್‌ಪೋರ್ಟಿಗೆ 57 ಸಾವಿರ ರೂಪಾಯಿಗಳು. printing of forms, ballot papers, cost of manufacturing symbols, etc., 6ಲಕ್ಷ 50 ಸಾವಿರ ರೂಪಾಯಿಗಳು; ಮಿಸಲೇನಿಯಸ್ 83 ಸಾವಿರ ರೂಪಾಯಿಗಳು. ಹೀಗೆ ಒಟ್ಟು 10ಲಕ್ಷ ರೂಪಾಯಿಗಳು.

ಶ್ರೀ ಬಿ. ರಾಚಯ್ಯ.—ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡುಗಳ ಚುನಾವಣೆಗಳು ಬೇರೆ ಬೇರೆ ಕಾಲದಲ್ಲಿ ಆಗುವುದರಿಂದ ಖರ್ಚು ಇನ್ನೂ ಜಾಸ್ತಿಯಾಗುತ್ತದಲ್ಲವೆ ?

ಶ್ರೀ ಟಿ. ಸುಬ್ರಹ್ಮಣ್ಯ.—ಹತ್ತು ಜಾಸ್ತಿಯಾಗಬಹುದು ಕಡಮೆಯಾಗಬಹುದು. ಇದು ರಫ್ ಎಸ್ಟಿಮೇಟು. ಇವೊತ್ತು ನಮ್ಮ ಬುದ್ಧಿಯನ್ನು ಉಪಯೋಗಿಸಿ ಮಾಡಿರುವುದು. ಆಕ್ಚುಯೆಲ್ ಎಕ್ಸ್‌ಪೆಂಡಿಚರ್‌ನಲ್ಲಿ ಆಗ ಸ್ವಲ್ಪ ಹೆಚ್ಚು ಕಡಮೆಯಾಗಬಹುದು.

Sri G. VENKATAI GOWDA.—As these bodies have to be constituted afresh, will it not affect seriously their revenue ?

Sri T. SUBRAMANYA.—Government itself has allotted about 2 crores and odd rupees for these Village Panchayats and Taluk Boards. 10 lakhs out of this forms only a small proportion.

Eviction of Unauthorised Cultivators in Machanahally Village, Turuvekere Taluk.

*Q.—186. Sri G. N. PUTTANNA (Tumkur).—

Will the Government be pleased to state :—

(*a*) whether they are aware that on 20th July 1957 the Minister for Revenue in reply to question No. 393 put by the member said, that the encroached area of Government road by the villagers of Machanahally in Turuvekere Taluk would be got vacated, as early as possible ;

(*b*) whether they are aware that by blocking the road about 200 to 300 ryots have been prevented from going to their lands;

(*c*) whether they will order the concerned authorities to evict the unauthorised cultivators immediately ?

A.—Sri KADIDAL MANJAPPA (Minister for Revenue).—

(*a*) It was stated that action would be taken as per rules.

(*b*) Only 5 ryots are put to inconvenience in going to their lands.

(*c*) Action is being taken as per rules to evict the unauthorised cultivators.

ಶ್ರೀ ಜಿ. ಎಸ್. ಪುಟ್ಟಣ್ಣ.—ನನ್ನ (ಬಿ) ಪ್ರಶ್ನೆಗೆ ಉತ್ತರವಾಗಿ ಐದು ಮಂದಿ ರೈತರುಗಳಿಗೆ ತೊಂದರೆಯಾಗಿದೆ ಎಂದು ಹೇಳಿದ್ದೀರಿ. 10-15 ಮಂದಿ ಗ್ರಾಮಸ್ಥರಿಗೆ ತಂತಮ್ಮ ಜಮೀನುಗಳಿಗೆ ಹೋಗುವುದಕ್ಕೆ ತಡೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

†Sri KADIDAL MANJAPPA.—According to the report I have received only five ryots are put to some inconvenience on account of the encroachments.